Registered No. B G 182

ಗೋರಕ್ಷಣ
GORAKSHANA

1964 ನೇ ಸೆಪ್ಟಂಬರು ತಿಂಗಳು September 1964

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

.... ಪ್ರತಿ ತಿಂಗಳು ತಾ || 25 ರಂದು ಪ್ರಕಟಿಸಲ್ಪಡುವುದು ....

ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ,ಪಶುವೈದ್ಯ
ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿನಂದನಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ– ಗೋರಕ್ಷಣ ಆಫೀಸು ಚಾಮರಾಪುರಂ, ಮೈಸೂರು 4

ಮೈ ಸೂ ರಿ ನ

ಗೋಹತ್ಯ ನಿರೋಧಕ

ಮತ್ತು

ಪಶುಸಂರಕ್ಷಣ

ಶಾಸನ 1964 ಕ್ಕೆ

ರಾಷ್ಟ್ರಪತಿಗಳು

ಅನುಮತಿ ನೀಡಿದ್ದಾರೆ

ಅತಿ ಹೆಚ್ಚು ಹಾಲುಕೊಡುವ ಹಸುಗಳ ಸ್ಪರ್ಧೆ

ನವದೆಹಲಿ— 1964–65 ನೇ ಸಾಲಿಗೆ ಸಂಬಂಧಿಸಿದಂತೆ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಹಾಲು ಕೊಡುವ ರಾಸುಗಳ ಅಖಿಲ ಭಾರತ ಸ್ಪರ್ಧೆಯೊಂದು ನಡೆಯುತ್ತಿದೆ : 1964 ಸೆಪ್ಟಂಬರು-ಅಕ್ಟೋಬರು ಮತ್ತು 1965 ಫೆಬ್ರವರಿ-ಮಾರ್ಚ್ ಈ ಎರಡು ಸಮಯಗಳಲ್ಲಿ ನಡೆಯುವ ಈ ಅಖಿಲ ಭಾರತ ಸ್ಪರ್ಧೆಗಳನ್ನು ಕೇಂದ್ರ ಗೋಸಂವರ್ಧನಾ ಪರಿಷತ್ತು ಏರ್ಪಡಿಸಿದೆ ; ವಿವಿಧ ಜಾತಿಯ ಉತ್ತಮ ಹಸುಗಳು ಮತ್ತು ಎಮ್ಮೆಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಅವಕಾಶವಿರುತ್ತೆ — ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಂದು ಜಾತಿಯ ರಾಸುಗಳ ಸ್ಪರ್ಧೆಯಲ್ಲಿ ಮೂರು ಮೂರು ಬಹುಮಾನಗಳುಂಟು : ಪ್ರಥಮ ಬಹುಮಾನ ರೂ 2000, ದ್ವಿತೀಯ ಬಹುಮಾನ ರೂ 2000 ತೃತೀಯ ಬಹುಮಾನ ರೂ 500 ; ಮೊದಲು 3 ಬಹುಮಾನ ಪಡೆಯುವ ರಾಸುಗಳಿಗೆ ಪ್ರಶಸ್ತಿ ಪತ್ರಗಳು ಕೊಡಲಾಗುವುದು ; ಮೊದಲನೆ ಬಹುಮಾನ ಪಡೆಯುವ ಹಸುವಿನ ಅಥವಾ ಎಮ್ಮೆಯ ಮಾಲೀಕರಿಗೆ ಗೋಪಾಲರತ್ನ ಪದಕವನ್ನೂ ಕೊಡಲಾಗುವುದು.

ಯಾವಪ್ರಾಣಿಯನ್ನು ತೃಪ್ತಿಪಡಿಸಿ ದರೂ ಪರಮಾತ್ಮನನ್ನು ತೃಪ್ತಿಪಡಿಸಿದಂತೆಯೇ

❋

ಪರಮಾತ್ಮನು ಎಲ್ಲಾ ಪ್ರಾಣಿಗಳಲ್ಲಿಯೂ ಇದ್ದಾನೆ : ಹೀಗಿರುವ ಪರಮಾತ್ಮನಿಗೆ ತೃಪ್ತಿಯಾಗಲಿ ಎಂದು ಅತಿಸುವ ಮಾನವನು ತನ್ನ ಸತ್ಯಮುತ್ತಲ ಪ್ರಾಣಿಗಳಿಗೂ ಮತ್ತು ಭಿಕ್ಷುಕರಿಗೂ ನಿತ್ಯವೂ ತಾನು ಊಟಮಾಡುವ ಮೊದಲು ಅನ್ನಾಹಾರಗಳಿತ್ತು ಸಂತೋಷಪಡಿಸಿದ ಬಳಿಕ ತಾವು ಊಟಮಾಡುವುದು ಕರ್ತವ್ಯವಾಗಿದೆ : 'ತದ್ಭುಕ್ತಾಶ್ಯೇನ ಏವ ಸಃ' ಎಂದರೆ ಬಲಿಶರಣಾದಿಗಳು ಮಾಡದೆ ಊಟಮಾಡಿದವನು ಕಳ್ಳಭೋಜನ ಮಾಡಿದವನೆಂದು ಅಭಿಪ್ರಾಯವಿದೆ ಈ ವೃಷ್ಟಿಯಿಂದ ಬಲಿಶರಣವು ಸಾಮಾನ್ಯ ರೀತಿಯಲ್ಲಿ ಒಂದು ವಿಧವಾದ ದೇವತಾರಾಧನೆಯೇ ಆಗಿದೆ : ಇದರಿಂದ ನಾಯಿಕಾಗೆ ಅನಾಥರು ಭಿಕ್ಷುಕರು ಇವರಿಗೆಲ್ಲಾ ತಾನು ತಿನ್ನತಕ್ಕ ಆಹಾರದಲ್ಲಿ ಸ್ವಲ್ಪ ಭಾಗವನ್ನು ಕೊಟ್ಟ ನಂತರ ಊಟಮಾಡಬೇಕು. (ಉ. ಕ)

❋

ಜನಸೇವೆಯೇ ಜನಾರ್ಧನ ಸೇವೆ

★

ಒಟ್ಟಿನಲ್ಲಿ ಹೇಳುವುದಾದರೆ ಅತಿಥಿ ಅಭ್ಯಾಗತರ ಸೇವೆ, ದುಃಖಗೊಂಡ ಪ್ರಾಣಿಗಳಲ್ಲಿ ಕನಿಕರ, ಗೋಸೇವೆ, ಸಾಧು ಸೇವೆ, ಸತ್ಯಪರಿಪಾಲನೆ, ಸತ್ಸಹವಾಸ ಮತ್ತು ಮೃದುವಾಧುರ ವಾಕ್ಯ. ಇವೇ ದೇವರಿಗೆ ಅತಿ ಹಿತವಾದ ಪೂಜಾ ಸಾಧನಗಳು ; ಎಳ್ಳುನೀರಿಲ್ಲವೂ ಆಡಂಬರಗಳು ; ಇಂಥಾ ಪೂಜಾರ್ಹತೆಯನ್ನು ಭಗವಂತನು ಪ್ರತಿ ಮಾನವನಿಗೂ ಕರುಣಿಸಲಿ. (ಉ ಕ)

❋

ಗೋಸಂರಕ್ಷಣೆ

★

ಗೋಸಂರಕ್ಷಣೆ ಕರ್ತವ್ಯವೆಂದಿರುವ ನಮ್ಮ ಸಂಸ್ಕಾರವು ಐರೋಪ್ಯ ನೀತಿ ಅನುಸರಿಸಿದೆ : ಹಿಂದೆ ಸಂಪತ್ತು ಲೆಕ್ಕಿಸಲಾಗುತ್ತಿದ್ದುದು ಅವನು ಹೊಂದಿದ್ದ ಗೋಸಂಖ್ಯೆಯ ಮೇಲಾಗಿತ್ತು ; ಇಂದು ದೇಶಾದ್ಯಂತ ಪಶುಗಳು ಸಹಸ್ರಗಟ್ಟಲೆ ವಧೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ

ಮೈಸೂರು ರಾಜ್ಯದ ಕಂದಾಯ ಮಂತ್ರಿ ಶ್ರೀ ಕೃಷ್ಣಪ್ಪನವರು ಈಚೆಗೆ ಹೇಳಿರುವ ವಿಷಯು ನಿಜವಾಗಿದ್ದರೂ ವ್ಯಸನಕರವೂ ಒಪ್ಪತಕ್ಕದ್ದಲ್ಲದ್ದೂ ಆಗಿದೆ ಮೇವಿನ ಅಭಾವವಿರುವುದರಿಂದ ಪಿಂಜಾರ್ ಪೋಲರುಗಳನು ತೆರೆಯುವುದು ಸಾಧ್ಯವಿಲ್ಲವೆಂದಿರುವರು : ಆದರೆ ಸಮೃದ್ಧಿ ಭೂಮಿಯಲ್ಲಿ ಅಭಾವವಿರಲಾರದೆಂದು ನಾವು ತಿಳಿಯಬೇಕು.

ಹಾಲು ಕರೆಯುವ ಹಸುಗಳನ್ನು ಮಾತ್ರ ಇಟ್ಟುಕೊಂಡು, ಗೊಡ್ಡಾದವನ್ನು ವಧಾಗೃಹಕ್ಕೆ ಕಳುಹಿಸಿಬಿಟ್ಟರೆ, ಮಕ್ಕಳಿಲ್ಲದ ಪಾಪವನ್ನು ಎಕೆ ಕತ್ತ ಮಾಡಬಾರದು ? ಕುಟುಂಬ ಯೋಜನೆ ಮತ್ತು ಗರ್ಭನಿರೋಧಕ್ಕೆ ಅನೇಕ ಮಾರ್ಗಗಳನ್ನು ಕಂಡುಹಿಡಿದಿರುವಂತೆ ಗೋರಕ್ಷಣೆ ಮಾರ್ಗ ಮತ್ತೂ ಅನುಕೂಲವಾಗಿ ಪಡೆಯುವ ಸಂತೋಧನೆ ನಡೆಯಬೇಕು. ಕಾರಿ ಮತ್ತಿಕರ ಮಾಂಸಗಳೊಡನೆ ಗೋಹತ್ಯ ಮತ್ತು ಗೋಮಾಂಸ ವಾರಾಟವು ಹಿಂದೂಗಳನ್ನು ಕೂಡ ತಿಳಿವಳಿಕೆ ಇಲ್ಲದೇಯೇ ಗೋಮಾಂಸ ತಿನ್ನುವಂತೆ ಮಾಡಿದೆ ; ಗೋಪೂಜಕರು ಮೇಲೆ ಇದು ಏನು ಪರಿಣಾಮ ಬೀರಬಹುದು ?

ಕೆಲವು ಹಸುಗಳು ವೃದ್ಧಾಪ್ಯದಿಂದ ಶಕ್ತಿಗುಂದಿದವೂ ಮತ್ತು ಗೊಡ್ಡಾಗಿಯೂ ಇರಬಹುದು : ಆದರೆ ಅವುಗಳ ಸಗಣಿ ಕಂಬಾ ಫಲದಾಯಕವಾಗಿದ್ದು ಬೆಳೆಗಳನ್ನು ಸಾಕಿ ಉತ್ಪತ್ತಿ ಹೆಚ್ಚಿಸುವ ಶಕ್ತಿಹೊಂದಿದೆ ; ಗೋಸಗಣಿ ಭೂಮಿಯನ್ನು ಹೆಚ್ಚು ಫಲವತ್ತಾಗಿ ಮಾಡಿ ವೃಥಲ್ಲದೆ ಫರ್ಟಿಲೈಜರುಗಳಿಗಿಂತ ಕಾಲಾನಂತರ ಭೂಮಿಯನ್ನು ವ್ಯವಸಾಯಕ್ಕೆ ಅನುಪಯೋಗ ಮಾಡುವುದಿಲ್ಲ.

ಹಿಂದೆ ಅವಶ್ಯಕವಾದ ಆಹಾರಧಾನ್ಯಗಳು ಬೇಕಾದುದಕ್ಕಿಂತಲೂ ಹೆಚ್ಚಾಗಿಯೇ ಬೆಳೆಯುತ್ತಿದ್ದ ನಮ್ಮ ದೇಶವು, ಅನೇಕ ವರ್ಷಗಳ ಸ್ವಾತಂತ್ರ್ಯದ ನಂತರವೂ ನಮ್ಮ ದೇಶವು ವಿದೇಶಗಳಿಂದ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಲಿದೆ ; ಎಲ್ಲದರಲ್ಲೂ ನಾವು ವಿದೇಶೀ ನೆರವು ಮತ್ತು ಮಾರ್ಗ ನೋಡುತ್ತಿದ್ದೇವೆ : ನಮ್ಮ ಸಂಸ್ಕೃತಿ ಮತ್ತು ಜೀವಿತ ಮಾರ್ಗಗಳನ್ನು ತ್ಯಜಿಸುತ್ತಲಿದ್ದೇವೆ ; ನವೀನ ಅಭಿವೃದ್ಧಿಯ ಹೆಸರಿನಲ್ಲಿ ನಮ್ಮ ಪುರಾತನ ಸಂಪ್ರದಾಯದ ಶ್ರೇಷ್ಠತೆಯು ಅಸಹ್ಯವಾಗಿದೆ : ಈಗ ನಾವು ವಿದೇಶಗಳ ಮೇಲೆ ಮತ್ತೂ ಪರಾಧೀನರಾಗುತ್ತಿದ್ದೇವೆ ಅಂಥಾ ಇತರರಂತೆ ಮಾಡುವ ಮತ್ತು ಇತರರನ್ನು ಅನುಕರಣೆ ಮಾಡುವದು ರಾಷ್ಟ್ರದ ಅಧಃಪತನದ ಶಂಕ್ತಿದೆ Truth ನಿಂದ ಅನುವಾದ

ವಸ್ತುಪ್ರದರ್ಶನ

ದಸರಾ ವಸ್ತುಪ್ರದರ್ಶನದ ಉದ್ಘಾಟನಾ ಸಮಾರಂಭವು ತಾ|| 5 ಅಕ್ಟೋಬರು ಬೆಳಿಗ್ಗೆ 9-15 ಕ್ಕೆ ಮಹಾರಾಷ್ಟ್ರ ಗೌರ್ನರ್ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಂದ ನೆರವೇರಿಸಲಾಗುವುದು.

★

ಬಂಧನ

ಮೈಸೂರು— ನಿನ್ನೆ ರೆಗ್ಯುಲೇಟೆಡ್ ಮಾರ್ಕೆಟ್ಟು ಬಳಿ ಇರುವ ಪಕಾರಿ ಅಂಗಾಣಕ್ಕೆ ನುಗ್ಗಲು ಯತ್ನಿಸಿದ ಎಸ್ಸೆಸ್ಸೆ ಪತ್ರಿಕೆಯ 28 ವರ್ಷದ ಸಕ್ರಿಯ ಕಾರ್ಯಕರ್ತರೊಬ್ಬರನ್ನು ಬಂಧಿಸಲ್ಪಟ್ಟಿದ್ದಾರೆ.

ಪ್ರಾಣಿದಯೆಯೆಂಬುದು ನಮ್ಮ ಕಾಯಕ

ಶ್ಲೋಕ ॥ ಸರ್ವಜೀವದೊಳಾತ್ಮನಾಗಿಹೆ ಸರ್ವಭೂತಕ್ಕೆ
ಳಾದಿಯಂತ್ಮನ ನಿರ್ವಹಿಸಿ ಭೂತಗಳ ಮ
ಧ್ಯದೊಳಾನೆ ಇರುತಿಹೆನು. (ಎಂಬುದೇ ಭಗವಾನು ವಾಣಿ)

॥ ಅಂಡಪಿಂಡಬ್ರಹ್ಮಾಂಡನಾಯಕನಾದ ಕೋದಂಡರಾಮಂಗೆ ಮಂಗಳಂ ॥ ಎಂದು ಹೇಳಿರುವುದರಿಂದ, ಹಕ್ಕಿ ಪಕ್ಷಿಗಳ ಹೊಟ್ಟೆಯಲ್ಲಿಯೂ ಜೀವಜಂತುಗಳ ಪಿಂಡದಲ್ಲಿಯೂ ಪರಮಾತ್ಮನಿರುವುದರಿಂದ ನಾವು ಯಾವ ಜೀವಿಗೂ ಬಾಧೆಕೊಡದೆ ಅವನ್ನು ಪಾಲಿಸಿ ಅವುಗಳಿಂದ ಕೆಲಸಕಾರ್ಯ ತೆಗೆದುಕೊಳ್ಳಬೇಕು:..... ಮೊಟ್ಟೆ ತಿನ್ನುವುದು ಭ್ರೂಣಹತ್ಯದೋಷವಾಗುವುದು ; ಜೀವಿಗಳನ್ನು ಕೊಂದು ತಿಂದರೆ, ಜೀವಧಾರಕರಾದ ಪಂಚಾಪಿಶೃಹತ್ಯ ದೋಷವಾಗುವುದು : ಇದೇ ಹಿಂದೂ ಧರ್ಮ, ಪಾಲಿಸುವುದೇ ಈಶ್ವರ ಪೂಜೆ ; ಭೂತದಯೆ ಇಲ್ಲದವನೇ ದೈತ್ಯನು.

— ಬಿ. ಜಿ. ಶಾಸ್ತ್ರಿ (ದ. ರೈ) ವೈಸೂರು

ಮೊಸಭವಿಷ್ಯ (16-9-64 ರಿಂದ 17-10-64 ವರೆಗೆ)

ಲೇಖಕರು— ಶ್ರೀ ಬಿ ಜಿ ಶಾಸ್ತ್ರಿ (ದ ರೈಲ್ವೆ) ವೈಸೂರು

ಮೇಷ— ಬಂಧುವಿರೋಧ, ಅಲ್ಪ ದೇಹಾಲಸ್ಯ ಧನಾಗಮ ಕಳತ್ರ ಸಂತಾನ ಸುಖ

ವೃಷಭ— ಗೃಹ ಶಾಂತಿಯಿಲ್ಲ ದೇಹಾಲಸ್ಯ ಕಳತ್ರ ಸೌಖ್ಯ ಅಪಕೀರ್ತಿ ಅಲ್ಪ ಲಾಭ

ಮಿಥುನ— ಸ್ವಜನವಿರೋಧ ವ್ಯಾಧಿಪೀಡೆ ಧನಾರ್ಜನೆ ಸಣ್ಣಪುಟ್ಟ ಪ್ರವಾಸ ಕುಟುಂಬಸೌಖ್ಯ

ಕರ್ಕಾಟಕ— ಬುದ್ಧಿಕ್ಲೇಶ ಜ್ವರಾದಿ ಪೀಡೆ ವ್ಯಾಕುಲ ವಾಕ್‌ಕಾಠಿಣ್ಯ ಸ್ತ್ರೀ ಸೌಖ್ಯ ಅಲ್ಪ ಧನಾರ್ಜನೆ ಶುಭಕಾರ್ಯಾಚರಣೆ

ಸಿಂಹ— ಮನೋವ್ಯಾಕುಲ ಭಾತೃಪೀಡೆ ಶತ್ರುಭಯ ಅಲ್ಪರೋಗಬಾಧೆ ಅಲ್ಪ ಧನಾಗಮ

ಕನ್ಯಾ— ಆದಾಯಕ್ಕೆ ಮೀರಿದ ಖರ್ಚು ಶುಭಕಾರ್ಯ ಧನವ್ಯಯ ಪ್ರಯಾಣ ಸ್ತ್ರೀನಷ್ಟ

ತುಲ— ಅತಿಯಾದ ಖರ್ಚು ಕಾರ್ಯದಿಂದ ಚಿಂತೆ ಅಲ್ಪ ಸೌಖ್ಯ ವ್ಯವಹಾರ ಕಷ್ಟ

ವೃಶ್ಚಿಕ— ಕಾರ್ಯವಿಘ್ನ ಧನಲಾಭ ಶುಭವೃದ್ಧಿ ಸಂತೋಷ ಸ್ತ್ರೀಮೂಲಕ ವ್ಯಯ

ಧನಸ್ಸು— ಧನಾರ್ಜನೆ ಭಯನಿವಾರಣೆ ವ್ಯಾಪಾರನಷ್ಟ ದೇಹಾಲಸ್ಯ ಕಳತ್ರ ಸೌಖ್ಯ

ಮಕರ— ರೋಗಬಾಧೆ ಹೆಚ್ಚು ಕಳತ್ರಪೀಡೆ ಬಂಧುಕಲಹ ಶುಭಸಮಾಚಾರ ಅದಾಯ ವಿಘ್ನ

ಕುಂಭ— ರೋಗಪೀಡೆ ಪ್ರವಾಸವಿಘ್ನ ಚಿಂತೆ ಅನುಕೂಲ ದಿಂತೆ ಅನುಕೂಲ ಕುಟುಂಬಪಾಠಿ, ಅಲ್ಪಾದಾಯ

ಮೀನ— ಶುಭಫಲ ಕಡಮೆ ಸ್ಥಾನನಾಶ ಸ್ತ್ರೀ ಸೌಖ್ಯಕಡಮೆ ದೇಹಾಲಸ್ಯ ಶೋಕ

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Advertise in

The Oldest Newspaper in the State

Sri 'SATYAVADI' Daily

Cmarajapuram, Mysore 4

ಶಾಸ್ತ್ರೀಯ ಆಯುರ್ವೇದ ಔಷಧಗಳು ದೊರೆಯುತ್ತವೆ

ಎಲ್ಲಾ ಜಾಯಿಲೆಗಳಿಗೂ, ಅದಂಲ್ಲಾ ಗಸ್ಟ್, ತೊನ್ನು, ಎಸಪ್ಪರ ಜಾಯಿಲೆಗಳಿಗೆ ಉತ್ತಮ ಚಿಕಿತ್ಸೆ ನಡೆಸಲಾಗುತ್ತದೆ

ಆಯುರ್ವೇದಶಿರೋಮಣಿ ಡಾ || ಪಿ ಎಸ್ ನಾರಾಯಣ್, ಗೋಸೇವಕರು

320 ಬಿ 5 ನೇ ಬ್ಲಾಕ್, ಜಯನಗರ, ಬೆಂಗಳೂರು 11

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದು ವಿನಂತಿ ; ಇವರ ಹೆಸರು ಆಗಾಗ್ಗೆ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಗೋರಕ್ಷಣಕ್ಕೆ ಚಂದಾ ಸಹಾಯದ್ರವ್ಯ ಮುಂತಾದ್ದನ್ನು ಸ್ವೀಕರಿಸುವವರು—
ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಜಯ್ಯಂಗಾರ್, ಶಾಶ್ವತಧರ್ಮ ಪ್ರಚಾರಸಭಾ, ಹೊಂಗನೂರು
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

ವುಡ್‌ಲಾಂಡ್ ಯಶಸ್ವಿ 3 ನೇ ವಾರ

ಶಿ ಸು

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ಆಪೆರಾ— ಜನಭರಿತ 2 ನೇ ವಾರ

ಅತ್ಯಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾಸ್ಟರ್

SHAKTI SUDHA

Superb Tonic

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4